ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು).

ಅ) ಟಿ.ನರಸೀಪುರ - ನಂಜನಗೂಡು ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ನೀರಾವರಿ ಪ್ರದೇಶದಲ್ಲಿ ಹಾದು ಹೋಗುತ್ತಿದ್ದು, ರಸ್ತೆಯು ಹಲವೆಡೆ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇದೆ. ಅಂದಾಜು ವೆಚ್ಚ 180.00 ಲಕ್ಷ ರೂ.ಗಳು.

ಇ) ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

ಧಾರವಾಡದ ಯಾತ್ರಾ ನಿವಾಸದ ಕಟ್ಟಡ

1676 (2194) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿನ ಯಾತ್ರಿ ನಿವಾಸದ ಕಟ್ಟಡವನ್ನು ನಿರ್ಮಿಸುವ ಕಾಮಗಾರಿಯು ಎಂದಿನಿಂದ ಪ್ರಾರಂಭಿಸಿ ಮುಕ್ತಾಯ ಗೊಳಿಸಲಾಗುವುದು; ಇದಕ್ಕಾಗಿ ಆಯವ್ಯಯದಲ್ಲಿ ಮೀಸಲಿಟ್ಟ ಹಣವೆಷ್ಟು;

ಆ) ಸದರಿ ಕಟ್ಟಡದ ನಿರ್ಮಾಣ ಕಾರ್ಯ ಈಗಾಗಲೇ ಪ್ರಾರಂಭವಾಗಿದ್ದರೆ, ಈಗ ಅದು ಯಾವ ಹಂತದಲ್ಲಿದೆ;

ಇ) ಈ ಕಟ್ಟಡದಲ್ಲಿ ಪ್ರವಾಸಿಗರಿಗಾಗಿ ಯಾವ ಯಾವ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ? ಇದರ ಕೊಠಡಿಗಳಿಗೆ ವಿಧಿಸಲು ಉದ್ದೇಶಿಸಿರುವ ಬಾಡಿಗೆ ಎಷ್ಟು? (ಪೂರ್ಣ ವಿವರ ಒದಗಿಸುವುದು)

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು).

ಅ) ಧಾರವಾಡದ ಯಾತ್ರಿ ನಿವಾಸ ಕಟ್ಟಡದ ಕೆಲಸವನ್ನು 1994-95ನೇ ಸಾಲಿನಲ್ಲಿ ಪ್ರಾರಂಭಿಸಿದ್ದು, ಇಷ್ಟರಲ್ಲೇ ಕಟ್ಟಡವನ್ನು ಇಲಾಖೆಯ ಸ್ವಾಧೀನಕ್ಕೆ ಪಡೆದುಕೊಂಡು ಪ್ರಾರಂಭೋತ್ಸವವನ್ನು ಆಚರಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಇದಕ್ಕೆ ತಗುಲಿರುವ ವೆಚ್ಚ ಸುಮಾರು ರೂ.75.00 ಲಕ್ಷಗಳು.

ಆ) ಕಟ್ಟಡದ ನಿರ್ಮಾಣ ಪೂರ್ಣಗೊಂಡಿದೆ.

ಇ) ಈ ಯಾತ್ರಿ ನಿವಾಸದಲ್ಲಿ ಪ್ರವಾಸಿಗರಿಗೆ ತಂಗಲು ಪ್ರತ್ಯೇಕ ಕೋಣೆಗಳು, ಡಾರ್ಮಿಟರಿ, ಸ್ನಾನ ಗೃಹಗಳನ್ನೊಳಗೊಂಡ ಶೌಚಾಲಯ ವ್ಯವಸ್ಥೆ ಭೋಜನಾಲಯ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ಸದರಿ ಸೌಲಭ್ಯದ ನಿರ್ವಹಣೆಯನ್ನು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರಿಗೆ ವಹಿಸಿಕೊಡಲಾಗುವುದು. ಬಾಡಿಗೆದರ ಇತ್ಯಾದಿಗಳನ್ನು ಸದರಿ ಸಂಸ್ಥೆಯ ನಿಯಮಾವಳಿ ಪ್ರಕಾರ ವಿಧಿಸಲಾಗುವುದು.